ವಿಷಯ: ರಾಜ್ಯ ಮಾರ್ಗಗಳನ್ನು ರಾಷ್ಟ್ರೀಯ ಹೆದ್ದಾರಿಗಳ ಗುಣಮಟ್ಟಕ್ಕೆ ವಿಸ್ತರಿಸುವುದು

2745 (4063)

ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರತಕ್ಕ ಎಷ್ಟು ರಾಜ್ಯ ಮಾರ್ಗಗಳನ್ನು ರಾಷ್ಟ್ರೀಯ ಹೆದ್ದಾರಿಗಳ ಗುಣ ಮಟ್ಟಕ್ಕೆ ವಿಸ್ತರಿಸಲಾಗುವುದು?

ಆ) ಅವುಗಳು ಯಾವುವು; ಅವುಗಳ ಒಟ್ಟು ಕಿಮೀ. ಎಷ್ಟು? ಇದಕ್ಕಾಗಿ ತಗಲಬಹುದಾದ ಅಂದಾಜು ವೆಚ್ಚ ಎಷ್ಟು?

ಇ) ಸದರಿ ಹಣ ಕ್ರೋಢೀಕರಣಕ್ಕಾಗಿ ಸರ್ಕಾರ ಕೈಕೊಂಡ ಕ್ರಮಗಳೇನು? ಈ ಕಾಮಗಾರಿಗಳು ಎಂದಿನಿಂದ ಪ್ರಾರಂಭವಾಗುವುವು? (ವಿವರಗಳನ್ನು ಒದಗಿಸುವುದು)

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಪ್ರಸ್ತಾವನೆಯಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ವಿಷಯ: ರಸ್ತೆಗಳ ಅಭಿವೃದ್ಧಿ ಯೋಜನೆ.

2746 (4062)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ 2500 ಕಿಮೀ.ರಸ್ತೆಗಳನ್ನು ಅಭಿವೃದ್ಧಿ ಪಡಿಸುವ ಯೋಜನೆ ಸರ್ಕಾರದ ಮುಂದೆ ಇರುವುದು ನಿಜವೆ?

ಆ) ಹಾಗಿದ್ದಲ್ಲಿ ಈ ಯೋಜನೆಗೆ ತಗಲಬಹುದಾದ ಅಂದಾಜು ವೆಚ್ಚ ಎಷ್ಟು? ಯಾವ ನೆರವಿನಿಂದ ಈ ರಸ್ತೆಗಳ ಅಭಿವೃದ್ಧಿ ಮಾಡಲಾಗುವುದು?

ಇ) ಈ ಯೋಜನೆಯಲ್ಲಿ ಆಳವಡಿಸಿಕೊಳ್ಳಲಾಗುವ ರಸ್ತೆಗಳು ಯಾವುವು;